ಈ) ಸರ್ಕಾರವು, ಕರ್ನಾಟಕ ಉಚ್ಚ ನ್ಯಾಯಾಲಯದೊಡನೆ ಸವಾಲೋಚಿಸಿ ವಿಷಯವನ್ನು ಪರಿಶೀಲಿಸುತ್ತದೆ. ಉಚ್ಚ ನ್ಯಾಯಾಲಯದ ಅಭಿಪ್ರಾಯಗಳನ್ನು ಪಡೆದ ತರುವಾಯ, ರಾಜ್ಯದ ಹಣಕಾಸು ಪರಿಸ್ಥಿತಿಯನ್ನು ಪರಿಗಣಿಸಿ ಮುಂದಿನ ಕ್ರಮವನ್ನು ಕೈಗೊಳ್ಳಲಾಗುವುದು.

ವಾಹನ ತನಿಖಾ ನಿರೀಕ್ಷಣಾಧಿಕಾರಿಗಳ ಆಯ್ಕೆ

೧೪೩೭. ಶ್ರೀ ಆರ್. ವೆಂಕಟರಾಮಯ್ಯ(ಮುಳುಬಾಗಿಲು).— ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೆ ?

ಅ) ವಾಹನ ತನಿಖಾ ನಿರೀಕ್ಷಣಾಧಿಕಾರಿಗಳ ಆಯ್ಕೆ ಬಗ್ಗೆ ಆಟೋಮೊಬೈಲ್, ಡಿಪ್ಲೋಮೋ ಪಡೆದಿರುವ ಅಭ್ಯರ್ಥಿಗಳೆಷ್ಟು ? ಮತ್ತು ಎಷ್ಟು ಮಂದಿ ಆಯ್ಕೆಯಾಗಿದ್ದಾರೆ.

ಆ) ಸದರಿ ವಿದ್ಯಾರ್ಹತೆಯನ್ನು ಪಡೆಯದಿದ್ದ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗಿದೆಯೇ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಈ ಬಗ್ಗೆ ದರ್ಖಾ ಹಾಗೂ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಿ, ಯಾವಾಗಿನಿಂದ ಜಾರಿಗೆ ತರಲಾಗುವುದು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಸಾರಿಗೆ ಮತ್ತು ವಸತಿ ರಾಜ್ಯ ಸಚಿವರು).—

ಅ) ದಿನಾಂಕ. ೨-೧೧-೧೯೭೮ರಲ್ಲಿ ಆದ ನೇಮಕಾತಿಯಂತೆ.—

೧)	ಆಟೋಮೊಬೈಲ್, ಡಿಪ್ಲೋಮೋ ಪಡೆದಿರುವ ಅಭ್ಯರ್ಥಿಗಳು—೧೧೯.
೨)	ಆಯ್ಕೆಯಾದವರ ಸಂಖ್ಯೆ—೨೨೫.

ಆ) ಹೌದು, ಪ್ರಸಕ್ತ ಜಾರಿಯಲ್ಲಿರುವ ಶ್ರೇಣಿ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಮೆಕ್ಯಾನಿಕಲ್ ಡಿಪ್ಲೋಮೋ ಅಥವಾ ಆಟೋಮೊಬೈಲ್ ಇಂಜಿನಿಯರಿಂಗ್ ಡಿಪ್ಲೋಮೋ ಪಡೆದ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಅವಕಾಶವಿದೆ.

ಇ) ಈ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ದಕ್ಷಿಣ ಕನ್ನಡ ಜಿಲ್ಲೆಗೆ ೧೯೮೫-೮೬ನೇ ಸಾಲಿಗೆ ಮಂಜೂರಾದ ಹೆಂಡ್ಕೊ ಮತ್ತು ಜನತಾ ಮನೆಗಳು

೧೪೧೨. ಶ್ರೀ ವಸಂತ ಎ. ಸಾಲ್ಯಾನ (ಕಾಪು).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಸಾರಿಗೆ ಮತ್ತು ವಸತಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡ ಜಿಲ್ಲೆಗೆ ೧೯೮೫-೮೬ನೇ ಸಾಲಿಗೆ ಮಂಜೂರು ಆದ ಹುಡ್ಕೋ ಮನೆಗಳೆಷ್ಟು ಹಾಗೂ ಜನತಾ ಮನೆಗಳೆಷ್ಟು ?

ಆ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಬೇಡಿಕೆಗಳಿರುವುದರಿಂದ ಸರ್ಕಾರದವರು ಹೆಚ್ಚಿನ ಮನೆಗಳನ್ನು ಮಂಜೂರು ಮಾಡುವರೆ ?

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಹಾಗೂ ವಸತಿ ರಾಜ್ಯ ಮಂತ್ರಿಗಳು).—

ಅ) ೨,೭೬೦ ಜನತಾ ಮನೆಗಳನ್ನು ಮಂಜೂರು ಮಾಡಲಾಗಿದೆ. ಕರ್ನಾಟಕ ಗೃಹ ಮಂಡಳಿಯು ಹುಡ್ಕೋ ಸಂಸ್ಥೆಯ ಸಾಲದ ನೆರವಿನಿಂದ ಮಂಗಳೂರು ನಗರದ ಪದವು-ಕಾಂಜತ್‌ಬೈಲ್ ಬಡಾವಣೆಯಲ್ಲಿ ೨೭೪ ಮನೆಗಳನ್ನು ಕಟ್ಟುವ ಯೋಜನೆ ಮಂಜೂರಾಗಿದೆ.

ಆ) ಹಣದ ಕೊರತೆ ಇರುವುದರಿಂದ ಹೆಚ್ಚಿನ ಜನತಾ ಮನೆಗಳನ್ನು ಮಂಜೂರು ಮಾಡಲಾಗುವುದಿಲ್ಲ. ಗೃಹ ಮಂಡಳಿಯು ನಗರ ಪ್ರದೇಶಗಳಲ್ಲಿ ಭೂ ಸ್ವಾಧೀನ ಪಡಿಸಿದ ನಂತರ ಹೆಚ್ಚಿನ ಮನೆಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದು.